ಅಲ್ಲಿಯ ಜಿಲ್ಲಾಧಿಕಾರಿಗಳು ಪ್ರತಿಯೊಂದು ಪಂಪ್ಸೆಟ್ಟಿಗೆ ಒಂದು ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಇನ್ನೂ ಕೂಡಾ ಹೆಚ್ಚು ಬೇಕಾದರೆ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಬಹುದು. ಒಂದನ್ನು ತಮ್ಮ ಗಮನಕ್ಕೆ ತರುತ್ತೇನೆ 9040 ಬಿದ್ದ ಮನೆಗಳಿಗೆ ಈಗಾಗಲೇ 50 ಲಕ್ಷ 37 ಸಾವಿರ ರೂಪಾಯಿ ಮುಂಡರಗಿ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದೇವೆ. 8295 ಮನೆಗಳು ಭಾಗಶಃ ಏನು ಬಿದ್ದಿವೆ ಅದಕ್ಕೆ 49 ಲಕ್ಷ ಬಿಡುಗಡೆ ಮಾಡಿದ್ದೇವೆ, ಮತ್ತು ನೀರಾವರಿ ಪಂಪುಸೆಟ್ಟುಗಳು 563, ನೀರಾವರಿ ಬಾವಿಗಳು 911, ಪಂಪ್ ಹೌಸ್ಗಳು 811 ಒಟ್ಟಿಗೆ ಇವುಗಳಿಗೆ 13ಲಕ್ಷ 48 ಸಾವಿರ ಬಿಡುಗಡೆ ಮಾಡಿದ್ದೇವೆ. ಒಟ್ಟು ಮುಂಡರಗಿ ಕ್ಷೇತ್ರಕ್ಕೆ ಹೋದವರ್ಷ 1 ಕೋಟಿ 13 ಲಕ್ಷ ಬಿಡುಗಡೆ ಮಾಡಿದ್ದೇವೆ, ದೊಡ್ಡ ಮೊತ್ತ ಬಿಡುಗಡೆ ಮಾಡಿದ್ದೇವೆ. ಪಂಪ್ಸೆಟ್ಟಿಗೆ ಮೂರು ಸಾವಿರ ರೂಪಾಯಿ ಕೊಡಬೇಕೆಂದು ಏನು ಆದೇಶ ಇದೆ ಕೇವಲ ಒಂದು ಸಾವಿರ ಬಂದಿದೆ ಎಂದು ಏನು ಹೇಳಿದ್ದಾರೆ, ಅದರ ಬಗ್ಗೆ ಚಿಕಪ್ ಮಾಡಿಸಿ ಮ್ಯಾಕ್ಸಿಮಮ್ ಎಷ್ಟು ಕೊಡಬೇಕೋ ಅದನ್ನೂ ಕೂಡಾ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ.ಹೆಚ್. ಕುರಡಗಿ : ಐದು ಹಳ್ಳಿಗಳನ್ನು ಸ್ಥಳಾಂತರ ಮಾಡುತ್ತೇವೆ ಎಂದು ಹೇಳಿದ್ದೀರಿ, ಇವತ್ತಿನವರೆಗೆ ಅವುಗಳನ್ನು ಸ್ಥಳಾಂತರ ಮಾಡಲಿಲ್ಲ. ಅದಕ್ಕೆ ಅಮೌಂಟ್ ಕೂಡಾ ಕೊಡಲಿಲ್ಲ. ಮತ್ತೆ 94-95ರ ಒಳಗೂ ಮತ್ತೆ ಫ್ಲಡ್ ಬಂದು ಮನೆಗಳು ಬಿದ್ದು ಹೋಗುತ್ತಿದೆ, ಅದಕ್ಕೆ ತಾವು ಏನು ಮಾಡುತ್ತೀರಿ?

ಶ್ರೀ ಧರ್ಮಸಿಂಗ್ : ಅಲ್ಲಿಯ ಕೆಲವು ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಒಟ್ಟು 66 ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದಾರೆ. ಈಗಾಗಲೇ 6 ಲಕ್ಷ 50 ಸಾವಿರ ಬಿಡುಗಡೆ ಮಾಡಿದ್ದೇವೆ. ಒಟ್ಟಾರೆ ಹೋದವರ್ಷ 92-93ನೇ ಸಾಲಿನಲ್ಲಿ ರಾಯಚೂರು, ಚಿತ್ರದುರ್ಗ, ಧಾರವಾಡ ಜಿಲ್ಲೆ ಮತ್ತು ಬೇರೆ ಕಡೆಗೆ ರಿಹ್ಯಾಬಿಲಿಟೇಷನ್ ಮಾಡತಕ್ಕ 126 ಹಳ್ಳಿಗಳಿಗೆ 1050 ಕೋಟಿ ರೂಪಾಯಿಗಳ ಯೋಜನೆ ಮಾಡಿ ಕೇಂದ್ರ ಸರ್ಕಾರದಿಂದ ಅಪ್ಪಣೆ ಪಡೆದು ವಿಶ್ವಬ್ಯಾಂಕ್ ನೆರವು ಪಡೆಯುವುದಕ್ಕೆ ಹೋಗಿದೆ. ಹೋದವರ್ಷ ಕೂಡಾ ಕೆಲವು ಎಫ್ಫೆಡ್ ವಿಲೇಜಸ್ಗಳನ್ನು ಗುರುತಿಸಿ ಇವುಗಳನ್ನು ಸೇರಿಸಬೇಕೆಂದು ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಆದರೂ ಕೂಡ ಸ್ಥಳಾಂತರ ಮಾಡುವುದಕ್ಕೆ ಲ್ಯಾಂಡ್ ಅಕ್ವೈರ್ ಮಾಡುವುದು ಬೇರೆ ಬೇರೆ ಕೆಲಸಕಾರ್ಯಗಳಿಗೆ 66 ಲಕ್ಷ ಅಂದಾಜು ಮಾಡಿ, ಈಗಾಗಲೇ 6 ಲಕ್ಷ 50 ಸಾವಿರ ನಾವು ಖರ್ಚು ಮಾಡಿದ್ದೇವೆ, ಲ್ಯಾಂಡ್ ಅವೈಲ್ಬಲ್ ಆದಮೇಲೆ ಸ್ಥಳಾಂತರ ಮಾಡತಕ್ಕ ಕೆಲಸ ಮಾಡುತ್ತೇವೆ.

ಶ್ರೀ ಧರ್ಮಸಿಂಗ್ : ಪ್ರಶ್ನೆ ಸಂಖ್ಯೆ : 191 ಸ್ವಲ್ಪ ಕಾಲಾವಕಾಶ ಕೇಳಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಈ ಸೆಕ್ಷನ್ನಲ್ಲೇ ಉತ್ತರ ಕೊಡುತ್ತೀರಾ?

ಶ್ರೀ ಧರ್ಮಸಿಂಗ್ : ಪೋಲೀಸ್ ಡಿಪಾರ್ಟ್ಮೆಂಟ್ನವರ ಜೊತೆ ಮೀಟಿಂಗ್ ಮಾಡಬೇಕಾಗಿದೆ. ಮಾಡಿ ಉತ್ತರ ಕೊಡುತ್ತೇವೆ.

ತುಮಕೂರು ನಗರಸಭೆಯ ವ್ಯಾಪ್ತಿಯಲ್ಲಿರುವ ಸ್ಥಳಗಳಿಗೆ ಮೂಲಭೂತ ನಾಗರೀಕ ಸೌಲಭ್ಯ

13 - ಶ್ರೀ ಶಫೀ ಅಹ್ಮದ್ (ತುಮಕೂರು) : ಮಾನ್ಯ ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರಸಭೆ ತುಮಕೂರು ವ್ಯಾಪ್ತಿಯೊಳಗಡೆ ಸೇರಿಸಲು ಉದ್ದೇಶಿಸಿರುವ ಕ್ಯಾತಸಂದ್ರ, ಸತ್ಯಮಂಗಲ, ಮೇಲುಕೋಟೆ ಮತ್ತು ಮಲ್ಲಸಂದ್ರ ಮಂಡಲ ಪ್ರದೇಶಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಅ) ಈ ಬಗ್ಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆಯೇ?

ಇ) ಮುನಿಸಿಪಾಲಿಟಿಗೆ ಸೇರಿದ ಈ ಪ್ರದೇಶದ ಸಾರ್ವಜನಿಕರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸದೇ ಇರುವುದರಿಂದ ತೊಂದರೆಯುಂಟಾಗಿರುವುದು ನಿಜವಲ್ಲವೇ?

ಶ್ರೀ ಸಿ. ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ ಸಚಿವರು): ಅ) ತುಮಕೂರು ನಗರಸಭೆಯ ವ್ಯಾಪ್ತಿಗೆ ಕ್ಯಾತಸಂದ್ರ, ಸತ್ಯಮಂಗಲ ಮತ್ತು ಮೇಲುಕೋಟೆ ಮಂಡಲ ಪ್ರದೇಶಗಳು ವಿಲೀನಗೊಂಡ ನಂತರ ಇವುಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗುವುದು.

ಆ) ಇಲ್ಲ.

ಇ) ಈ ಹಳ್ಳಿಗಳು ತುಮಕೂರು ನಗರಸಭೆ ವ್ಯಾಪ್ತಿಯಲ್ಲಿ ಇನ್ನೂ ಸೇರ್ಪಡೆಯಾಗಿರುವುದಿಲ್ಲ.

ಶ್ರೀ ಎಸ್. ಶಫೀ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತುಮಕೂರು ನಗರದ ವ್ಯಾಪ್ತಿಯಲ್ಲಿ ಮೊನ್ನೆ ತಾನೆ ಪ್ರಿಲಿಮಿನರಿ ನೋಟಿಫಿಕೇಷನ್ಮಾಡಿದ ನಾಲ್ಕು ಮಂಡಲ್ಗಳಿಗೆ ಚುನಾವಣೆ ಇನ್ನೂ ನಡೆದಿಲ್ಲ. ಕಳೆದ ಆರು ತಿಂಗಳಿಂದ ಜಿಲ್ಲಾ ಪರಿಷತ್ ವತಿಯಿಂದಾಗಲೀ, ಟಿ.ಎಂ.ಸಿ. ವತಿಯಿಂದಾಗಲೀ ಅಲ್ಲಿ ಯಾವ ವಿಧವಾದ ಕಾರ್ಯಕ್ರಮಗಳೂ ಆಗುತ್ತಿಲ್ಲ. ಅಲ್ಲಿರುವ ಸುಮಾರು ಒಂದು ಲಕ್ಷ ಜನಗಳಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಮಾನ್ಯ ಸಚಿವರು ಫೈನಲ್ ನೋಟಿಫಿಕೇಶನ್ ಯಾವಾಗ ಮಾಡುತ್ತಾರೆ ಮತ್ತು ಅಲ್ಲಿರುವ ಜನಗಳಿಗೆ ಸೌಕರ್ಯ ಒದಗಿಸುವ ಬಗ್ಗೆ ಯಾವ ರೀತಿ ಕಾರ್ಯಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

1.30 ಪಿ.ಎಂ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಗರಪಾಲಿಕೆ ತಿದ್ದುಪಡಿ ಕಾಯ್ದೆಯನ್ನು ಈ ಅಧಿವೇಶನದಲ್ಲೇ ನಾವು ತರುತ್ತಿದ್ದೇವೆ. ಇದರಲ್ಲಿ ನಾವು ಈಗಾಗಲೇ ಗ್ರಾಮೀಣ ಪ್ರದೇಶ ಮತ್ತು ಪಟ್ಟಣದ ಹತ್ತಿರ ಇರುವ ಗ್ರಾಮೀಣ ಪ್ರದೇಶವನ್ನು ನಗರಪಾಲಿಕೆ ಅಥವಾ ನಗರಸಭೆಗಳ ವ್ಯಾಪ್ತಿಯಲ್ಲಿ ಸೇರಿಸಬೇಕು ಎನ್ನುವ ಉದ್ದೇಶ ಸರ್ಕಾರದ್ದು ಇದೆ. ಇವರು ಕೇಳಿರುವಂತಹ ಗ್ರಾಮಗಳೂ ಸಹ ತುಮಕೂರು ನಗರಸಭೆಯ ವ್ಯಾಪ್ತಿಯಲ್ಲಿ ಬರುತ್ತವೆ. ಈ ನಗರಸಭೆಯ ವ್ಯಾಪ್ತಿಯನ್ನು ನಿಗಧಿಪಡಿಸುವಂತಹ ಸಂದರ್ಭದಲ್ಲಿ ಇವುಗಳನ್ನು ನಾವು ನಗರಸಭಾ ವ್ಯಾಪ್ತಿಯಲ್ಲಿ ಸೇರಿಸುತ್ತೇವೆ ಎನ್ನುವಂತಹ ಒಂದು ವಿಚಾರವನ್ನು ಸಹ ಈಗಾಗಲೇ ಸಾರ್ವಜನಿಕ ತಿಳುವಳಿಕೆಗಾಗಿ ಮತ್ತು ಶಾಸಕರ ತಿಳುವಳಿಕೆಗಾಗಿ ಆಗಲೇ ಕೊಟ್ಟಿದ್ದೇವೆ. ಇನ್ನು ಕೆಲವು ದಿವಸಗಳಲ್ಲಿ ನಾವು ಈ ಗ್ರಾಮಗಳನ್ನು ತುಮಕೂರು ನಗರಸಭಾ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳುವಂತಹ ಯೋಜನೆ ಇದೆ. ಇನ್ನು ಎರಡು ಮೂರು ತಿಂಗಳುಗಳಲ್ಲಿ ನಾಗರೀಕ ಸೌಲತ್ತುಗಳನ್ನು ದೊರಕಿಸಿಕೊಡುವ ಭರವಸೆ ಕೊಡುತ್ತೇನೆ?

ಶ್ರೀ ಎಸ್. ಶಫೀ ಅಹಮದ್ : ಮಾನ್ಯ ಅಧ್ಯಕ್ಷರೇ, ತಾವು ಸಿ.ಎಂ. ಸಿ. ಅವರಿಗೆ ಆದೇಶ ಕೊಟ್ಟು ಬೀದಿ ದೀಪ, ಕುಡಿಯುವ ನೀರು, ಮತ್ತು ಸ್ಯಾನಿಟೇಶನ್ ಮುಂತಾದ ಕನಿಷ್ಠ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಅಲ್ಲಿಯವರೆಗೂ ಅನುಕೂಲವಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ.